ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: ಸಿ7(6) ಪ್ರಾ.ಶಿ.ಅ /ಆ.ಮಾ/ಪ/ಭಾಗ-4 /2015-16 ದಿನಾಂಕ: 03-10-2015

**-:ಜ್ಞಾ ಪ ನಾ:-**

**ವಿಷಯ :** ಘನ ಸರ್ವೋಚ್ಚ ನ್ಯಾಯಾಲಯದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ, 1994 ರ ನಂತರ ಪ್ರಾರಂಭಗೊಂಡ ಕನ್ನಡ ಮಾಧ್ಯಮದ/ಇತರೆ ಮಾಧ್ಯಮ ಶಾಲೆಗಳಿಗೆ ಆಂಗ್ಲ ಮಾಧ್ಯಮದ ಬೋಧನೆಗೆ ಅವಕಾಶ ಕೋರಿದ್ದ ಪ್ರಕರಣಗಳಲ್ಲಿ, **ದಕ್ಷಿಣಕನ್ನಡ ಜಿಲ್ಲೆ** ಜಿಲ್ಲೆಗೆ ಸಂಬಂಧಪಟ್ಟಂತೆ, 2015-16 ನೇ ಸಾಲಿನಿಂದ 1-5 ನೇ ತರಗತಿ ಆಂಗ್ಲ ಮಾಧ್ಯಮ ಬೋಧನೆಗೆ ಪರಿವರ್ತನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಎಸ್.ಎಲ್.ಪಿ.18139-18163 /2008 ಅನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಿ ಸಂವಿಧಾನ ಪೀಠಕ್ಕೆ ವರ್ಗಾವಣೆಗೊಂಡ ತರುವಾಯದಲ್ಲಿ ದಿ: 06-05-2014 ರಲ್ಲಿ ಹೊರಟಿರುವ ತೀರ್ಪು.

2. ದಿ: 06.05.2014 ರ ತೀರ್ಪಿನ ಕುರಿತು ಸಲ್ಲಿಸಲಾಗಿದ್ದ ಮರು ಪರಿಶೀಲನಾ ಅರ್ಜಿ ಸಂಖ್ಯೆ: 1878-1911/2014 ರಲ್ಲಿ ದಿ: 09.09.2014 ರಂದು ವಜಾ ಆದೇಶ. ನಂತರದಲ್ಲಿ ರಾಜ್ಯ ಸರ್ಕಾರ ದಾಖಲಿಸಿದ್ದ ಪರಿಹಾರಾತ್ಮಕ ಅರ್ಜಿಯ (Curative Petition) **ಆದೇಶ.**
3. ಸರ್ಕಾರದ ಅರೆ ಸ.ಪ.ಇಡಿ.263.ಪಿಜಿಸಿ.2015, ದಿನಾಂಕ:2-6-2015.
4. ಏಕ ಕಡತದಲ್ಲಿನ ಸರ್ಕಾರದ ಆದೇಶ ದಿನಾಂಕ:6-6-2015.
5. ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ರವರು ನೀಡಿರುವ ಪ್ರಸ್ತಾವನೆ ದಿನಾಂಕ:26-06-2015 ಮತ್ತು ದಿನಾಂಕ:15-07-2015.
6. ಏಕ ಕಡತದಲ್ಲಿನ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.359.ಪಿಜಿಸಿ.2015, ದಿನಾಂಕ:5-9-2015.

***********

1994-95 ರಲ್ಲಿ ಜಾರಿಗೊಳಿಸಲಾದ ಭಾಷಾ ನೀತಿ ಕುರಿತಂತೆ ಹಲವು ಸಂಸ್ಥೆಗಳು ಮೊದಲಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ರಿಟ್ ಅರ್ಜಿಯಲ್ಲಿ 2008 ರಲ್ಲಿ ತೀರ್ಪು ಹೊರಬಿದ್ದು ನಂತರ ಸರ್ಕಾರವು ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶೇಷ ರಜಾ ಅರ್ಜಿಯನ್ನು ದಾಖಲಿಸಿ ಅಂತಿಮವಾಗಿ ದಿನಾಂಕ : 06-05-2014 ರಲ್ಲಿ ಘನ ಸರ್ವೋಚ್ಛ ನ್ಯಾಯಾಲಯದ ಸಂವಿಧಾನದ ಪೀಠವು ತೀರ್ಪು ನೀಡಿದ ಮತ್ತು ಕರ್ನಾಟಕ ರಾಜ್ಯ ಘನ ಉಚ್ಚ ನ್ಯಾಯಾಲಯ ಕೆಲವು ಪ್ರಕರಣಗಳಲ್ಲಿ, ನಿಂದನಾ ದಾವೆಯು ಸೇರಿದಂತೆ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಅನುಷ್ಟಾನಗೊಳಿಸುವಂತೆ ಆದೇಶಿಸಿದೆ. ಈ ಹಿನ್ನಲೆಯಲ್ಲಿ 01 ರಿಂದ 5ನೇ ತರಗತಿಗೆ ಆಂಗ್ಲ ಮಾಧ್ಯಮದ ಪರಿವರ್ತನೆಗೆ ಸರ್ಕಾರವು ಉಲ್ಲೇಖ-3 ಮತ್ತು 4, 5 ರಲ್ಲಿ ಅನುಮತಿ ನೀಡಿರುತ್ತದೆ.

ಉಲ್ಲೇಖ (5) ರಲ್ಲಿ ಉಪನಿರ್ದೇಶಕರು **ದಕ್ಷಿಣಕನ್ನಡ ಜಿಲ್ಲೆ** ಇವರಿಂದ ಬಂದಿರುವ ಪ್ರಸ್ತಾವನೆಗಳಲ್ಲಿ ಸದರಿ ಶಾಲೆಗಳು 01 ರಿಂದ 5ನೇ ತರಗತಿಯವರೆಗೆ ಶಾಲೆಯು ಪ್ರಾರಂಭವಾದಾಗಿನಿಂದ ನಿರಂತರವಾಗಿ ನಡೆಯುತ್ತಿದ್ದು, ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ನೀಡಬಹುದೆಂದು ಉಪ ನಿರ್ದೇಶಕರು ಅಭಿಪ್ರಾಯ ನೀಡಿದ್ದಾರೆ. ಸದರಿಯವರ ಅಭಿಪ್ರಾಯ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಆದೇಶಗಳಂತೆ, **ಕೆಳಕಂಡ 20** ಶಾಲೆಗಳಿಗೆ 2015-16ನೇ ಶೈಕ್ಷಣಿಕ ಸಾಲಿನಿಂದ 01 ರಿಂದ 5ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಕೆಳಗಿನ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.